No.MAG(3)/NPP/98/2023-2024

No.MAG(3)/NPP/99/2023-2024





# ಹೊಂಗನಸು

ಸ್ಥಾಪನೆ : ೧೯೭೯

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೭೯

| ಸಂಪುಟ: ೧೪ ಸಂಚಿಕೆ: ೫ | ಆಗಸ್ಟ್ ೨೦೨೬ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ಪರಾಭವ ಸಂವತ್ಸರ |
|---|---|---|---|---|
| Volume: 14 Issue: 5 | August 2026 | Pages-8 | Annual Subscription Rs.20/- | ಆಷಾಢ-ಶ್ರಾವಣ ಮಾಸ |


ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ.ಎಸ್.ಎಲ್.ಮಂಜುನಾಥ್**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕ
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷ

**ಪದಾಧಿಕಾರಿಗಳು**

- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷಕ**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕ**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

## ಸಂಪಾದಕೀಯ

೧೨೫ ವರ್ಷಗಳ ಸಮೃದ್ಧ ಪರಂಪರೆಯನ್ನು ಹೊಂದಿರುವ ಕನ್ನಡ ಕಾದಂಬರಿ ಸಾಹಿತ್ಯ ಪ್ರಕಾರ ಪ್ರಸ್ತುತ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ ಎಂಬ ಧ್ವನಿಯೊಂದು ಕನ್ನಡ ಸಾಹಿತ್ಯ ವಲಯದಲ್ಲಿ ಕೇಳಿಬರುತ್ತಿದೆ. ಆದರೆ ಅದನ್ನು ಅಕ್ಷರಶಃ ಒಪ್ಪಿಕೊಳ್ಳುವುದು ಕಷ್ಟಸಾಧ್ಯ.

ಇಂದಿಗೂ ಕನ್ನಡ ಕಾದಂಬರಿಯ ಸ್ಥಿತಿ ವೈವಿಧ್ಯಮಯವಾಗಿದ್ದು, ಅಷ್ಟೇ ಚೈತನ್ಯಭರಿತವಾಗಿದೆ. ಮುದ್ರಿತ ಪುಸ್ತಕಗಳ ಜೊತೆಗೆ ಡಿಜಿಟಲ್ ಪುಸ್ತಕಗಳ ಬೆಳವಣಿಗೆಯಿಂದ ಹೊಸ ಹೊಸ ಲೇಖಕರು ಮತ್ತು ಹೊಸ ಮಾದರಿಯ ಓದುಗ ವರ್ಗ ರೂಪುಗೊಂಡಿದೆ. ಸಾಮಾಜಿಕ ಸಮಸ್ಯೆಗಳು, ಮಹಿಳಾ ಬದುಕು, ಪರಿಸರ, ನಗರ ಜೀವನ, ತಂತ್ರಜ್ಞಾನ, ಮನೋವಿಜ್ಞಾನ ವಿಷಯಗಳನ್ನೊಳಗೊಂಡಿದೆ. ಹಿರಿಯ ಕಾದಂಬರಿಕಾರರ ಜೊತೆಗೆ ಯುವ ಲೇಖಕರು, ಮಹಿಳಾ ಸಾಹಿತಿಗಳು ಹೊಸ ಮಾದರಿಯ ಕಥನ ಶೈಲಿಗಳನ್ನು ಪರಿಚಯಿಸುತ್ತಿದ್ದು, ಸಮಕಾಲೀನ ಜೀವನಾನುಭವಗಳನ್ನು ತಮ್ಮ ಕಾದಂಬರಿಗಳ ಮೂಲಕ ಅಭಿವ್ಯಕ್ತಿಸುತ್ತಿದ್ದಾರೆ. ಇ–ಪುಸ್ತಕಗಳು, ಆನ್‌ಲೈನ್ ಓದು ವೇದಿಕೆಗಳು, ಸಾಮಾಜಿಕ ಜಾಲತಾಣಗಳ ಮೂಲಕ ಕನ್ನಡ ಕಾದಂಬರಿಗಳು ಹೆಚ್ಚು ಹೆಚ್ಚು ಯುವಜನರನ್ನು ತಲುಪುತ್ತಿವೆ. ಜೊತೆಗೆ ಲೇಖಕರೇ ತಮ್ಮ ಕೃತಿಗಳನ್ನು ನೇರವಾಗಿ ಓದುಗರಿಗೆ ತಲುಪಿಸುವ ಅವಕಾಶವೂ ಹೆಚ್ಚಾಗಿದೆ. ಓದುಗರ ಅಭಿರುಚಿಯಲ್ಲಿಯೂ ಬದಲಾವಣೆ ಬಂದಿದ್ದು, ಸಣ್ಣ ಗಾತ್ರದ ಕಾದಂಬರಿಗಳು, ರೋಚಕ ಕಥಾವಸ್ತು, ಕುತೂಹಲಕಾರಿ ವಿಷಯಗಳ, ಜೀವನಾಧಾರಿತ ವಿಚಾರಗಳ, ವೈಜ್ಞಾನಿಕ ಹಾಗೂ ವೈಚಾರಿಕ ವಸ್ತುವುಳ್ಳ ಕಾದಂಬರಿಗಳಿಗೆ ಉತ್ತಮ ಬೇಡಿಕೆ ಸೃಷ್ಟಿಯಾಗಿದೆ.

ಇಂತಹ ಭರವಸೆಯ ನಡುವೆಯೂ, ಸವಾಲುಗಳು ಇಲ್ಲದೆ ಇಲ್ಲ. ಇಂಗ್ಲಿಷ್ ಮತ್ತು ಇತರ ಭಾಷೆಗಳ ಪ್ರಭಾವ, ಪುಸ್ತಕ ಓದುವ ಅಭ್ಯಾಸದಲ್ಲಿ ಕುಸಿತ, ಪ್ರಕಟಣಾ ವೆಚ್ಚದ ಏರಿಕೆ ಮತ್ತು ವಿವಿಧ ಮನರಂಜನೆಯ ಸ್ಪರ್ಧೆ ಕನ್ನಡ ಕಾದಂಬರಿ ಕ್ಷೇತ್ರದ ಪ್ರಮುಖ ಸವಾಲುಗಳಾಗಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಕಾದಂಬರಿ ಸಾಹಿತ್ಯವನ್ನು ಇನ್ನಷ್ಟು ಜೀವಂತವಾಗಿಡಲು ಲೇಖಕರು, ಪ್ರಕಾಶಕರು, ಶಿಕ್ಷಣ ಸಂಸ್ಥೆಗಳು ಮತ್ತು ಓದುಗ ವಲಯ ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ. ಶಾಲೆ–ಕಾಲೇಜುಗಳಲ್ಲಿ ಓದುವ ಸಂಸ್ಕೃತಿಯನ್ನು ಉತ್ತೇಜಿಸುವುದು, ಉತ್ತಮ ಕೃತಿಗಳನ್ನು ಡಿಜಿಟಲ್ ರೂಪದಲ್ಲಿ ಲಭ್ಯವಾಗುವಂತೆ ಮಾಡುವುದು, ಸಾಹಿತ್ಯ ಚರ್ಚಾಕೂಟಗಳನ್ನು ನಡೆಸುವುದು ಅಗತ್ಯವಾಗಿದೆ.

ಒಟ್ಟಾರೆಯಾಗಿ ಕನ್ನಡ ಕಾದಂಬರಿ ಸಾಹಿತ್ಯವು ಬಿಕ್ಕಟ್ಟಿನಲ್ಲಿಲ್ಲ. ಅದು ಪರಿವರ್ತನೆಯ ಹಂತದಲ್ಲಿದೆ. ಈ ಪರಿವರ್ತನೆಯನ್ನು ಸೃಜನಾತ್ಮಕವಾಗಿ ಸ್ವೀಕರಿಸಿದರೆ ಕನ್ನಡ ಕಾದಂಬರಿಗೆ ಉತ್ತಮ ಭವಿಷ್ಯದ ಸಾಧ್ಯತೆಗಳಿವೆ. ಉತ್ತಮ ಸಾಹಿತ್ಯದ ಬೆಳವಣಿಗೆಗೆ ಲೇಖಕರ ಸೃಜನಶೀಲತೆ ಮಾತ್ರವಲ್ಲ, ಓದುಗರ ಸಕ್ರಿಯ ಭಾಗವಹಿಸುವಿಕೆಯೂ ಅಷ್ಟೇ ಮುಖ್ಯವಾಗುತ್ತದೆ.

**ಡಾ. ಎಸ್.ಎಲ್. ಮಂಜುನಾಥ್**

ಪ್ರಕಟಣೆ

## ಪ್ರೊ. ಎನ್. ಬಸವಾರಾಧ್ಯರ ಜನ್ಮಶತಮಾನೋತ್ಸವ

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ ೧೯೯೨ರಿಂದ ೨೦೦೧ರ ವರೆಗೆ ಸೇವೆ ಸಲ್ಲಿಸಿದ ಪ್ರೊ. ಎನ್. ಬಸವಾಧ್ಯರ ಜನ್ಮಶತಮಾನೋತ್ಸವದ ಅಂಗವಾಗಿ ಅವರ ಬದುಕು ಬರಹ ಕುರಿತ ಒಂದು ದಿನದ ವಿಚಾರ ಸಂಕಿರಣವನ್ನು ೨೩.೦೮.೨೦೨೬ರಂದು ಭಾನುವಾರ ಬೆಳಗ್ಗೆ ೯.೩೦ರಿಂದ ಸಂಜೆ ೫.೦೦ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಕುಟುಂಬವರ್ಗದವರು, ಒಡನಾಡಿಗಳು, ಹಿತೈಷಿಗಳು ಆಯೋಜಿಸಿದ್ದು, ಪ್ರತಿಷ್ಠಾನದ ಆಸಕ್ತ ಸದಸ್ಯರು ಭಾಗವಹಿಸಬೇಕೆಂದು ವಿನಂತಿಸಲಾಗಿದೆ.

## ಜುಲೈ ಮಾಹೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕನ್ನಡ-ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮಗಳ ವರದಿ

### ೩/೭/೨೦೨೬ ಸೋಮವಾರ ಸಂಜೆ ೫.೦೦ ಗಂಟೆಗೆ

### ರಾಸ ಸಾಹಿತ್ಯ ಮತ್ತು ಸಮೇತನಹಳ್ಳಿ ರಾಮರಾವ್, ಪ್ರೊ. ಡಿ.ಲಿಂಗಯ್ಯ, ಪ್ರೊ. ಟಿ.ಎಸ್.ವೆಂಕಣ್ಣಯ್ಯ, ಪ್ರೊ. ತೀ.ನಂ.ಶ್ರೀಕಂಠಯ್ಯ ಹಾಗೂ ಶ್ರೀಮತಿ ಶಾರದಮ್ಮ ಹನುಮಯ್ಯ ಸಂಯುಕ್ತ ದತ್ತಿ ಉಪನ್ಯಾಸ.

**ಸಹಯೋಗ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

**ವಿಷಯ: ಬೇಂದ್ರೆ ಮತ್ತು ಮಧುರಚೆನ್ನರ ಕಾವ್ಯಗಳಲ್ಲಿ ಅನುಭಾವ**
**ವಿಚಾರ ಮಂಡನೆ: ಡಾ. ಸತ್ಯಮಂಗಲ ಮಹಾದೇವ**
**ಅಧ್ಯಕ್ಷತೆ: ಡಾ. ಬೈರಮಂಗಲ ರಾಮೇಗೌಡ**

ಕಾರ್ಯಕ್ರಮದ ಆರಂಭದಲ್ಲಿ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಬಿ.ಎಸ್.ಗುರುಪ್ರಸಾದ್ ಐದು ದತ್ತಿಗಳನ್ನು ಒಟ್ಟುಗೂಡಿಸಿ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದು ಹೇಳಿ ಆ ದತ್ತಿಗಳು ಯಾರ ಯಾರ ಹೆಸರಿನಲ್ಲಿವೆ ಎಂದು ಸವಿಸ್ತಾರವಾಗಿ ಪರಿಚಯಿಸಿಕೊಟ್ಟರು. ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲ ಕನ್ನಡ ಪ್ರಾಧ್ಯಾಪಕರು. ಶ್ರೇಷ್ಠ ಸಾಹಿತಿಗಳು. ಬಹುಭಾಷಾ ಪಂಡಿತರು. ಇವರ ಹೆಸರಿನಲ್ಲಿ ಬೆಳಗೆರೆ ಕೃಷ್ಣಶಾಸ್ತ್ರಿಗಳು ದತ್ತಿಯನ್ನು ಸ್ಥಾಪಿಸಿದ್ದಾರೆ. ಹಾಗೆಯೇ ತೀ.ನಂ.ಶ್ರೀ. ಅವರ ಮಗ ನಾಗಭೂಷಣ್ ಅವರೂ ಒಂದು ದತ್ತಿಯನ್ನು ಇರಿಸಿದ್ದಾರೆ. ತೀ.ನಂ.ಶ್ರೀ. ಎಂದಕೂಡಲೇ ನೆನಪಾಗುವುದು ಅವರು ತಮ್ಮ ಕೈಬರಹದಲ್ಲಿ ಸಂಪಾದನೆ ಮಾಡಿರುವ ಗದಾಯುದ್ಧ ಸಂಗ್ರಹ. ಆ ಮೂಲ ಪ್ರತಿ ನಮ್ಮ ಬಿ.ಎಂ.ಶ್ರೀ.ಪ್ರತಿಷ್ಠಾನದಲ್ಲಿದೆ ಎನ್ನುವುದು ಹೆಮ್ಮೆಯ ಸಂಗತಿ. ಅದನ್ನು ತುಂಬಾ ವರ್ಷಗಳಿಂದ ಜಾಗರೂಕತೆಯಿಂದ ಕಾಪಾಡಿಕೊಂಡು ಬಂದಿದ್ದೇವೆಂದು ತಿಳಿಸಿದರು. ಶ್ರೀಮತಿ ಶಾರದಮ್ಮ ಹನುಮಯ್ಯ ಇತಿಹಾಸ ಅಕಾಡೆಮಿಯ ಸದಸ್ಯರಾದ ಡಾ. ಜಯಮ್ಮ ಕರಿಯಣ್ಣ ಅವರು ತಮ್ಮ ತಂದೆ ತಾಯಿಯ ಹೆಸರಿನಲ್ಲಿರಿಸಿರುವ ದತ್ತಿ. ಸಮೇತನಹಳ್ಳಿ ರಾಮರಾವ್ ದತ್ತಿಯನ್ನು ಡಾ. ಭಾರತಿ ಕಾಸರಗೋಡು ಅವರು ಇರಿಸಿದ್ದಾರೆಂದು ಸಭೆಗೆ ಪರಿಚಯಿಸಿಕೊಟ್ಟರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ವೇದಿಕೆಯಲ್ಲಿರುವ ಗಣ್ಯರನ್ನು, ಸಭಿಕರನ್ನು ಕಾರ್ಯಕ್ರಮಕ್ಕೆ ಆತ್ಮೀಯವಾಗಿ ಸ್ವಾಗತಿಸಿದರು. ಎಲ್ಲರನ್ನೂ ಸ್ವಾಗತಿಸುತ್ತಾ ಇವತ್ತಿನ ವಿಚಾರ ಮಂಡನೆಯನ್ನು ನಡೆಸಿಕೊಡಲು ಆಗಮಿಸಿರುವವರು ಡಾ. ಸತ್ಯಮಂಗಲ ಮಹಾದೇವ ಅವರು. ಇವರ ಬಗ್ಗೆ ಇರುವ ಅಭಿಮಾನದಿಂದ ಇವತ್ತಿನ ವಿಚಾರ ಗೋಷ್ಠಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಬಂದಿರುವುದು ತುಂಬಾ ಸಂತೋಷವನ್ನುಂಟು ಮಾಡುತ್ತಿದೆ. ಇದೊಂದು ಬರೀ ಗೋಷ್ಠಿಯಾಗಿರದೆ ಸಂವಾದದ ಗೋಷ್ಠಿಯಾದರೆ ಚೆನ್ನಾಗಿರುತ್ತದೆಂದು ಅಭಿಪ್ರಾಯಪಟ್ಟರು. ಡಾ.ಸತ್ಯಮಂಗಲ ಮಹಾದೇವ ಅವರು ಪ್ರಾಧ್ಯಾಪಕರಾಗಿ, ಕವಿಯಾಗಿ, ವಿಮರ್ಶಕರಾಗಿ, ಸಂಪಾದಕರಾಗಿ ಹೊಸ ತಲೆಮಾರಿನವರ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲುವಂತಹ ಒಬ್ಬ ಭರವಸೆಯ ಸಾಹಿತಿಯಾಗಿ ಗುರುತಿಸಿಕೊಂಡಿದ್ದಾರೆ. ಇವರ ಮೊದಲ ಕವನ ಸಂಕಲನಕ್ಕೆ ಏಳು ಪ್ರಶಸ್ತಿಗಳು ಲಭ್ಯವಾಗಿವೆ. ಬೇರೆ ಬೇರೆ ರಾಜ್ಯಗಳಲ್ಲಿ ನಡೆಯುವ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆಂದು ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಬೈರಮಂಗಲ ರಾಮೇಗೌಡರು ವಹಿಸಿಕೊಂಡಿದ್ದರು.



**ವಿಚಾರ ಮಂಡನೆ : ಡಾ. ಸತ್ಯಮಂಗಲ ಮಹಾದೇವ:**
**ವಿಷಯ : ಬೇಂದ್ರೆ-ಮಧುರಚೆನ್ನರ ಕಾವ್ಯಗಳಲ್ಲಿ ಅನುಭಾವ:**

ಬಿ.ಎಂ.ಶ್ರೀ.ಗೆ ಬರುವುದೆಂದರೆ ತುಂಬಾ ಸಂತೋಷವಾಗುತ್ತದೆ. ಕಾರಣ ನನ್ನನ್ನು ಕೈಹಿಡಿದು ಬೆಳೆಸಿದ ಸಂಸ್ಥೆ ಇದು. ಜೊತೆಗೆ ಈಗ ನನ್ನ ಗುರುಗಳಾದ ಡಾ. ಬೈರಮಂಗಲ ರಾಮೇಗೌಡರು ಅಧ್ಯಕ್ಷರಾಗಿರುವುದು, ಆತ್ಮೀಯರಾದ ಡಾ. ಶಾಂತರಾಜು ಕಾರ್ಯದರ್ಶಿಗಳಾಗಿರುವುದು, ಇವರೆಲ್ಲರಿರುವ ಇಂತಹ ಪ್ರೀತಿಯ ವಾತಾವರಣಕ್ಕೆ ಬರುವುದೇ ಒಂದು ಆನಂದದ ವಿಷಯ.

ಬೇಂದ್ರೆ ಎಲ್ಲರಿಗೂ ಗೊತ್ತೇ ಇರ್ತಾರೆ. ಹಾಗೇ ಮಧುರಚೆನ್ನರು ಅನುಭಾವದ ಬಹುದೊಡ್ಡ ಕವಿಗಳು. ಅನುಭಾವದ ಅಪ್ಪಟ ಕವಿ. ನವೋದಯದ ಸಂದರ್ಭದಲ್ಲಿ ತಮ್ಮ ಇಡೀ ಜೀವನವನ್ನು ಅನುಭಾವಕ್ಕೆ ಅರ್ಪಿಸಿಕೊಂಡ ಇಂತಹ ಮತ್ತೊಬ್ಬ ಕವಿ ಇಲ್ಲ ಎಂದೇ ಹೇಳಬಹುದು. ಬೇಂದ್ರೆ ಅವರು ಮಧುರಚೆನ್ನರನ್ನು ಕುರಿತಾಗಿ ಏಳು ಕವಿತೆಗಳನ್ನು ಬರೆದಿದ್ದಾರೆ.

ಕಾಣುವುದು ಒಂದು ನೋಡುವುದು ಒಂದು. ನಾವು ಬರಿಗಣ್ಣಿಗೆ ಕಾಣುವುದನ್ನು ಪ್ರಮಾಣೀಕರಿಸುತ್ತೇವೆ. ನೋಡುವುದಕ್ಕೆ ಸಾಧ್ಯವಾಗದೇ ಅನುಭವಕ್ಕೆ ಬಂದ ಘಟನೆಗಳನ್ನು, ಲೌಕಿಕ ಜೀವನದಲ್ಲಿ ವಿಸ್ಮಯವೆಂದೋ ಅಥವಾ ವಿಚಿತ್ರವೆಂದೋ ದೂರವಿಡುತ್ತೇವೆ. ಇಂದಿನ ದಿನಮಾನದಲ್ಲಿ ಸಹಜವಾದ ಬದುಕು ವಿಚಿತ್ರವೆಂದೂ, ಅಸಹಜವಾದ ಆಕರ್ಷಣೆಯ ಕ್ಷಣಿಕ ಸುಖಗಳು ಸೃಷ್ಟಿಸುವ ಭ್ರಮಾತ್ಮಕ ಲೋಕವೇ ಸಹಜವಾದುದೆಂದು ನಂಬಿಸಿದ್ದಾರೆ ಮತ್ತು ನಂಬಿದ್ದೇವೆ. ನಾವು ನಂಬಿದ ಇಂತಹ ಆಚರಣೆಗಳಿಗೆ ನಮ್ಮ ಅಳತೆಗೋಲುಗಳನ್ನು ನಿರ್ಮಿಸಿಕೊಂಡು ಅಧ್ಯಾತ್ಮ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದ್ದೇವೆ. ಕಾಣುವುದನ್ನು ನಾವು ಅಂತರಂಗದ ಬೆಳಕಿನಲ್ಲಿ ದರ್ಶನ ಮಾಡಲು ಸಾಧ್ಯವಾದರೆ ಈ ಭ್ರಮೆಯ ಪೊರೆ ಕಳಚಿ ವಾಸ್ತವದ ಸಹಜ ಪ್ರತ್ಯಕ್ಷಾನುಭವ ಉಂಟಾಗುತ್ತದೆ. ಅಸಹಜ ಬದುಕಿನ ಸಿನಿಕತೆಯನ್ನು ಹೋಗಲಾಡಿಸಲು ನಮಗೆ ನಮ್ಮ ಕನ್ನಡ ಸಾಹಿತ್ಯದಲ್ಲಿ ವಿಪುಲವಾದ ಅನೇಕ ಕೃತಿಗಳು ಸಿಗುತ್ತವೆ. ಬದುಕನ್ನೇ ಕೃತಿಯಾಗಿಸಿದ ವರಕವಿ ಬೇಂದ್ರೆ ಅನುಭಾವಜೀವಿ ಮಧುರಚೆನ್ನರ ಆಧ್ಯಾತ್ಮಿಕ ಬಾಂಧವ್ಯದ ಚಿಂತನೆಗಳು ನಾವು ಬರಿಗಣ್ಣಿನಲ್ಲಿ ಕಾಣುವುದನ್ನು ಹೇಗೆ ನೋಡಬೇಕೆಂಬ ತಾತ್ವಿಕಚಿಂತನೆಯನ್ನು ಹೃದಯದಲ್ಲಿ ಅರಳಿಸುತ್ತವೆ. ಹೀಗೆ

ಹೃದಯವನ್ನು ಅರಳಿಸುವ ಭಾವಪುಷ್ಪಗಳು ಅನಂತಶಕ್ತನ ಚಿಂತನೆಯನ್ನು ಕೆನೆಹಾಲಿನಂತೆ ಕಳೆಗಟ್ಟುವಂತೆ ಮಾಡುತ್ತವೆ ಎಂಬುದು ನನ್ನ ನಂಬಿಕೆ.

ಬೇಂದ್ರೆ ಮತ್ತು ಮಧುರಚೆನ್ನರ ಬಾಂಧವ್ಯ ಅದು ಸಹಜವಾದ ಗೆಳೆತನವೇ ಆದರೂ ಅವರೊಳಗಿದ್ದ ಆಧ್ಯಾತ್ಮಿಕ ಒಲವು–ನಿಲುವುಗಳು ಅವರಲ್ಲಿ ಆಧ್ಯಾತ್ಮಿಕ ನೆಲೆಯ ಸಖ್ಯಭಾವವನ್ನು ಬೆಸೆಯುವಂತೆ ಪ್ರೇರೇಪಿಸಿದವು. ಇಬ್ಬರೂ ನಂಬಿದ ಗುರುಗಳು ಒಬ್ಬರೇ ಶ್ರೀ ಅರವಿಂದರು, ಇಬ್ಬರೂ ನಂಬಿದ ಮಾತೃತ್ವದ ಭಗವತ್‌ಚಿಂತನೆ ಒಬ್ಬರೇ ಶ್ರೀಮಾತೆಯವರು. ಆದರೆ ಇಬ್ಬರೊಳಗಿನ ಸಾಧನೆಯ ಗುರಿ ಅನುಭಾವವೇ ಆದರೂ ಅವರು ಕ್ರಮಿಸಿದ ಹಾದಿ ಬೇರೆ ಬೇರೆ.

**ನನ್ನ ನಿನ್ನ ಬೆನ್ನ ಬಳಿ ವಿಶಾಲವೃಕ್ಷ ಬೆಳೆದಿದೆ**
**ಮುಗಿಲ ತುಂಬಿ ಉಳಿದಿದೆ**
**ಗಾಳಿಯಂತೆ ಸುಳಿದಿದೆ**

**ನನ್ನ ನಿನ್ನ ನೋಟ ಮಾತ್ರ ಎರಡು ದಿಕ್ಕಿಗೆಳೆದಿದೆ**
**ಬೇರೆ ಹಾದಿ ತುಳಿದಿದೆ**

**–ಬೇಂದ್ರೆ; ಚೆನ್ನ; ನಾದಲೀಲೆ**

ಬೇಂದ್ರೆಯವರ ಕಾವ್ಯದಲ್ಲಿ ಉಪಾಸನೆಯ ಅನುಭಾವದ ನೆಲೆ ಮತ್ತು ವಿವಿಧ ಸ್ತರಗಳಲ್ಲಿ ವಿಸ್ತರಿಸಿದ ಆಧ್ಯಾತ್ಮಿಕ ವಿಧಾನಗಳಲ್ಲಿನ ತಾತ್ವಿಕ ಸತ್ವಗಳ ಹುಡುಕಾಟದೊಳಗೆ ಅನುಭಾವ ಸೆಲೆಯೊಡೆದಿದೆ. ಇದು ಅವರ ಗದ್ಯ ಮತ್ತು ಕವಿತೆಗಳಲ್ಲಿ ಸಾಂದ್ರವಾಗಿ ವ್ಯಕ್ತವಾಗುತ್ತದೆ.

ಮಧುರಚೆನ್ನರ ಕಾವ್ಯದಲ್ಲಿ ಅನ್ವೇಷಣೆ ಮತ್ತು ಶೋಧದ ನೆಲೆಯಲ್ಲಿ ಅನುಭಾವದ ನೆಲೆ ತುಂಬಿಕೊಂಡಿದೆ. ವಿಸ್ತಾರವಾದ ನೆಲೆಯಲ್ಲಿ ಆಧ್ಯಾತ್ಮಿಕ ಸತ್ವಗಳನ್ನು ಹುಡುಕುವ ಮಾರ್ಗದಲ್ಲಿ ಬೇಂದ್ರೆಯವರ ಕಾವ್ಯ ಹರಳುಗಟ್ಟುತ್ತದೆ. ಆಳವಾದ ಶೋಧನೆ ಅದು ತನ್ನಿಂದಲೇ ಸಾಕ್ಷೀಕರಿಸಿಕೊಂಡ ತನ್ನ ಆತ್ಮದ ನೆಲೆಯ ಹುಡುಕಾಟದಲ್ಲಿ ಕಾವ್ಯ ಅನುಭಾವವನ್ನೇ ಧ್ವನಿಸುತ್ತದೆ. ಮಧುರಚೆನ್ನರ ಸಾಧನೆಯ ಮಾರ್ಗದಲ್ಲಿ ಕಾವ್ಯ ಹರಳುಗಟ್ಟುತ್ತದೆ.

ಈ ಇಬ್ಬರೂ ಕವಿಗಳಲ್ಲಿನ ಕಾವ್ಯದಲ್ಲಿ ಧ್ವನಿಸುವ ತಾತ್ವಿಕತೆ ಅದು ಆಧ್ಯಾತ್ಮಿಕ ಪರಿಸರದಿಂದ ಬಿಡಿಸಿಕೊಂಡ ಯೌಗಿಕ ಪ್ರಯಾಣದಲ್ಲಿ ಸಾಮ್ಯತೆ ಇದೆ. ಆದರೆ ಇಬ್ಬರೂ ತಮ್ಮ ತಮ್ಮ ಅನುಭಾವದ ನೆಲೆಗೆ ತಲುಪಲು ಬಳಸಿದ ಹಾದಿ ಮಾತ್ರ ಬೇರೆ ಬೇರೆ.

ಕನ್ನಡದ ಹಿರಿಯ ವಿದ್ವಾಂಸರೂ ಬೇಂದ್ರೆ ಕಾವ್ಯ ವಿಮರ್ಶಕರೂ ಆದ ಡಾ. ಜಿ. ಕೃಷ್ಣಪ್ಪನವರು ನನ್ನನ್ನು ಮಧುರಚೆನ್ನರ ಆಧ್ಯಾತ್ಮಿಕ ಕರ್ಮಭೂಮಿ ಹಲಸಂಗಿಗೆ ದಿನಾಂಕ ೦೭.೧೨.೨೦೧೮ರಂದು ಕರೆದುಕೊಂಡು ಹೋಗಿದ್ದರು. ಮಧುರಚೆನ್ನರು ಬದುಕಿದ್ದ ಮನೆಯಲ್ಲಿ ಅವರ ಮಗ ಶ್ರೀ ಪುರುಷೋತ್ತಮ ಗಲಗಲಿಯವರನ್ನು ಸಂದರ್ಶನ ಮಾಡಿ ಪ್ರಶ್ನೆಗಳನ್ನು ಕೇಳಿದಾಗ, ಮಧುರಚೆನ್ನರ ಶ್ರದ್ಧೆ ಎಂತಹುದು ಎಂದು ಒಂದು ಘಟನೆಯನ್ನು ವಿವರಿಸಿದರು. "ಬೇಂದ್ರೆಯವರನ್ನು ನಾವು 'ಕಾಕ' ಎಂದೇ ಕರೆಯುತ್ತಿದ್ದೆವು. 'ಮೇಘದೂತ' ಕಾವ್ಯವನ್ನು ನಮ್ಮ ಮನೆಯಲ್ಲಿ ಗೆಳೆಯರ ಗುಂಪಿನೊಂದಿಗೆ ಚರ್ಚಿಸಿದ್ದು ನೆನಪಿದೆ. ಮಧುರಚೆನ್ನರು ೧೯೫೩ ಆಗಸ್ಟ್ ೧೫ಕ್ಕೆ ದೇಹ ಬಿಟ್ಟರು. ಅದಕ್ಕಿಂತ ಕೆಲವು ದಿನಗಳ ಹಿಂದೆ ತೀವ್ರ ಅನಾರೋಗ್ಯ ನಿಮಿತ್ತ ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದಿದ್ದೆವು. ಡಾಕ್ಟರ್ ಅವರ ತೀರ್ಮಾನವು ಇನ್ನೂ ಕೆಲವು ದಿನ ಮಾತ್ರ ಉಳಿಯುತ್ತಾರೆ ಎಂದಿತ್ತು.

ಮನೆಯಲ್ಲಿ ಅನಾರೋಗ್ಯಕ್ಕೀಡಾಗಿದ್ದ ತಂದೆಯವರನ್ನು ನೋಡಲು ಬೇಂದ್ರೆಯವರು ಬಂದಿದ್ದರು. ಕ್ಯಾನ್ಸರ್‌ನಿಂದ ಬಳಲಿದ ಮನಸ್ಸಿಗೆ ಶಾಂತಿ ಸಿಗುತ್ತದೆ, ಎಲ್ಲರೂ ಮೃತ್ಯುಂಜಯ ಮಂತ್ರ ಹೇಳಿ, ಚೆನ್ನಮಲ್ಲಪ್ಪನಿಗೂ ಸಮಾಧಾನವಾಗಲಿ ಎಂದು ಮಂತ್ರವನ್ನು ಮಧುರಚೆನ್ನರಿಗೂ ಹೇಳಿಕೊಟ್ಟರು. ನಾವೆಲ್ಲಾ ಪಠಿಸಿದೆವು. ಆದರೆ ಮಧುರಚೆನ್ನರು 'ತಾಯವ್ವೆ ತಾಯವ್ವೆ' ಎನ್ನುತ್ತಿದ್ದರು." ಎಂದು ಹೇಳಿದರು. ಶ್ರೀ ಅರವಿಂದಾಶ್ರಮ, ಶ್ರೀಮಾತೆಯವರ ಬಗ್ಗೆ ಇದ್ದ ಅವರ ಶ್ರದ್ಧೆಯನ್ನು ಜೀವಿತದ ಕೊನೆ ಕ್ಷಣಗಳಲ್ಲೂ ಮಧುರಚೆನ್ನರು ಬಿಟ್ಟಿರಲಿಲ್ಲ ಎಂಬುದಕ್ಕೆ ಈ ಪ್ರಸಂಗ ಸಾಕ್ಷಿಯಾಗಿದೆ.

"ಗೆಳೆಯರ ಗುಂಪಿನ ಅಧ್ವರ್ಯು ಬೇಂದ್ರೆ ನಿಜವಾದ ಗೆಳೆಯನ ಅಂತ್ಯದರ್ಶನಕ್ಕಾಗಿ ಕೈಮುಗಿದು ನಿಂತರು. ಕಂಠ ಬಿಗಿದು ಮಾತು ಕಟ್ಟಿದ್ದರಿಂದ ಗಂಭೀರವಾದ ಮೌನದಲ್ಲಿ ಮಹಾಕವಿಯು ಕಾವ್ಯರ್ಷಿಯನ್ನು ಅದಾವ ಭಾಷೆಯಲ್ಲಿಯೋ ಮಾತಾಡಿ ಬೀಳ್ಕೊಟ್ಟರು. 'ಅಲ್ಲಮಪ್ರಭುಗಳೇ, ನಿಮ್ಮ ಬಸವಣ್ಣನವರನ್ನು ಎಲ್ಲಿ ಬಿಟ್ಟಿರಿ?' ಎಂದ ಬಸಮ್ಮನವರ ಆಕ್ರೋಶವು ಅಲ್ಲಿ ನಿಂತಿದ್ದವರನ್ನೆಲ್ಲಾ ಕರಗಿಸಿಬಿಟ್ಟಿತು."[೧] ಈ ದೃಶ್ಯವನ್ನು ಕಂಡ ಸಿಂಪಿ ಲಿಂಗಣ್ಣನವರು ದಾಖಲಿಸಿರುವ ಈ ಘಟನೆಯ ಮೂಲಕವೂ ವ್ಯೋಮಮೂರ್ತಿ ಅಲ್ಲಮನಂತಹ ವ್ಯಕ್ತಿತ್ವದ ಬೇಂದ್ರೆ, ಭಕ್ತಿಯ ಮೂಲಕವೇ ಭಂಡಾರಿಯಾದ ಬಸವಣ್ಣನ ವ್ಯಕ್ತಿತ್ವದ ಮಧುರಚೆನ್ನರ ವ್ಯಕ್ತಿತ್ವವನ್ನು ನಾವು ವಿವರಿಸಿಕೊಳ್ಳಬಹುದಾಗಿದೆ.

"ಚೆನ್ನಮಲ್ಲಪ್ಪನನ್ನು ಹೂತಿಲ್ಲ, ಬಿತ್ತಿದ್ದೇವೆ" ಎನ್ನುವ ಬೇಂದ್ರೆಯವರ ಮಾತಿನಲ್ಲಿ ಆತ್ಮ ಶೋಧಿಸಿಕೊಂಡು ಆತ್ಮಜೀವನದ ವಿವಿಧ ಹಂತಗಳನ್ನು ಲೌಕಿಕ ಜೀವನದಲ್ಲಿ ಬದುಕಿ ತೋರಿಸಿದ ಮಧುರಚೆನ್ನರ ಬೀಜ ಕೇಂದ್ರಿತ ನೆಲೆಯ ಅಧ್ಯಾತ್ಮ ಬಾಂಧವ್ಯದ ಸೂಕ್ಷ್ಮವನ್ನು ದರ್ಶನ ಮಾಡಿಸುತ್ತದೆ.

ನವೋದಯ ಕಾಲಘಟ್ಟದ ಈ ಇಬ್ಬರು ಕವಿಗಳ ಸಹಜ ಜೀವನದ ಈ ಘಟನೆಗಳಲ್ಲಿ ಲೌಖಿಕದೊಳಗಿದ್ದೂ ಪಾರಮಾರ್ಥವನ್ನು ಸಾಧಿಸಿಕೊಳ್ಳುವ ಸೂಕ್ಷ್ಮತೆ ಬರುತ್ತದೆ.

**ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು**
**ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆದೆವು**

**–ಅರಳು ಮರಳು; 'ಚೈತ್ಯಾಲಯ'**

ಈ ಬೆಳಕಿನ ಬಾಂಧವ್ಯದಿಂದ ಬಂದ ನಾವು ನಮ್ಮೊಳಗಿನ ದ್ವೇಷ, ಅಸೂಯೆ, ಅಶಾಂತಿಗಳನ್ನು ನಿವಾರಿಸಿಕೊಂಡು ಬೆಳಕಿನತ್ತ ನಡೆಯಬೇಕೆಂಬುದು ಬೇಂದ್ರೆಯವರ ಆಧ್ಯಾತ್ಮಿಕ ಚಿಂತನೆಯಾಗಿದೆ.

ಒಟ್ಟಾರೆಯಾಗಿ ನಾವು ನಮ್ಮ ಬದುಕಿನ ಸಂತೋಷಗಳನ್ನು ಸದಾ ಹೊರಗೇ ಹುಡುಕುತ್ತೇವೆ. ನಮ್ಮೊಳಗೇ ಇರುವ ಪ್ರೀತಿ, ಸ್ನೇಹ, ಬಾಂಧವ್ಯಗಳಲ್ಲಿ ಒಂದು ಮಹತ್ತಾದ ಆಧ್ಯಾತ್ಮಿಕ ಸೆಲೆಯಿದೆ ಎಂಬುದನ್ನು ಮರೆತಿದ್ದೇವೆ ಇಂತಹ ಜೀವಸೆಲೆಗಳನ್ನು ಪೋಷಿಸುವ ಕಾವ್ಯವನ್ನು ಬೇಂದ್ರೆ ಮತ್ತು ಮಧುರಚೆನ್ನರು ಕನ್ನಡ ಕಾವ್ಯಲೋಕಕ್ಕೆ ನೀಡಿದ್ದಾರೆ" ಎಂದು ಅತ್ಯಂತ ಸೊಗಸಾದ ವಿಚಾರ ಮಂಡನೆಯನ್ನು ಮಾಡಿದರು.

ವಿಚಾರ ಮಂಡನೆಯ ನಂತರ ಅಧ್ಯಕ್ಷತೆ ವಹಿಸಿದ್ದ ಡಾ.ಬೈರಮಂಗಲ ರಾಮೇಗೌಡರು ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡಿದರು.

ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

## ೧೮/೭/೨೦೨೬ ಶನಿವಾರ ಸಂಜೆ ೪.೩೦ ಗಂಟೆಗೆ
## ಸರಳ, ಸಜ್ಜನ, ಕವಿ, ಪ್ರಾಧ್ಯಾಪಕ ಡಾ. ಪ್ರಭಾಕರ ಕೃ. ಬೆಳವಾಡಿ ಅವರಿಗೆ ನುಡಿನಮನ.

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕೋಶಾಧಿಕಾರಿಗಳಾಗಿದ್ದು, ನಂತರದಲ್ಲಿ 'ಹೊಂಗನಸು' ವಾರ್ತಾಪತ್ರಿಕೆಯ ಸಂಪಾದಕರಾಗಿ, ಹಲವಾರು ಸುಧಾರಣೆಗಳನ್ನು ತಂದಿದ್ದ ಡಾ. ಪ್ರಭಾಕರ ಕೃ. ಬೆಳವಾಡಿ ಅವರು ತಮ್ಮ ವಯೋಸಹಜ ಅನಾರೋಗ್ಯದಿಂದ ೬/೭/೨೦೨೬ರಂದು ದೈವಾಧೀನರಾದರು. ಇವರಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ದಿನಾಂಕ ೧೮/೭/೨೦೨೬ರ ಸಂಜೆ ೪.೩೦ಕ್ಕೆ ಬಿ.ಎಂ.ಶ್ರೀ. ಕಲಾಭವನದಲ್ಲಿ ನುಡಿನಮನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಪದಾಧಿಕಾರಿಗಳು, ಅವರ ಹಿತೈಷಿಗಳು ಹಾಗೂ ಕುಟುಂಬ ವರ್ಗದವರು ಭಾಗವಹಿಸಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ "ಡಾ. ಪ್ರಭಾಕರ ಬೆಳವಾಡಿ ಅವರು ತಮ್ಮ ಸರಳ ಸಜ್ಜನಿಕೆಯಿಂದ, ಕವಿಯಾಗಿ ಹಾಗೂ ಅವರ ವ್ಯಕ್ತಿತ್ವದಿಂದ ಜನಪ್ರಿಯರಾಗಿ ಬಾಳಿದವರು. ಅವರ ಎಲ್ಲಾ ಆಶಯಗಳು ಒಂದು ಕ್ರಮದಲ್ಲಿ ನಡೆದುಕೊಂಡು ಹೋಗುತ್ತಿತ್ತು. ಅವರು 'ಬಿ.ಎಂ.ಶ್ರೀ. ಅವರು ನಮ್ಮ ಬಂಧುಗಳೆಂದು, ನನಗೆ ಸಾಹಿತ್ಯ ಸಂಘಟನೆಗಳಲ್ಲಿ ಆಸಕ್ತಿ ಇದೆ' ಎಂದು ತಮ್ಮನ್ನು ಪರಿಚಯಿಸಿಕೊಂಡೇ ಪ್ರತಿಷ್ಠಾನದ ಅಂಗಳಕ್ಕೆ ಪ್ರವೇಶ ಮಾಡಿದರು. ನಂತರ ಚುನಾವಣೆಯಲ್ಲಿ ಸ್ಪರ್ಧಿಸಿ ಕಾರ್ಯಕಾರಿ ಸಮಿತಿಯೊಳಗೆ ಪ್ರವೇಶ ಮಾಡಿ ನಿರಂತರವಾದ ಕಾರ್ಯಚಟುವಟಿಕೆಗಳಿಂದ ಪ್ರತಿಷ್ಠಾನದ ಭಾಗವೇ ಆಗಿದ್ದರು. ಪ್ರತಿಷ್ಠಾನದ ಹೊಂಗನಸು ಪತ್ರಿಕೆಯ ಸಂಪಾದಕರಾದ ಮೇಲೆ ಅದರ ಸ್ವರೂಪವನ್ನೇ ಬದಲಾವಣೆ ಮಾಡಿ ಮತ್ತಷ್ಟು ಆಕರ್ಷಕವಾಗಿ, ವಿಭಿನ್ನವಾಗಿ ಹೊರಹೊಮ್ಮುವಂತೆ ಮಾಡಿದವರು. ಅವರು ಕೋಶಾಧಿಕಾರಿಗಳಾಗಿದ್ದಾಗ ಹೊಸ ಹೊಸ ರೀತಿಯಲ್ಲಿ ಆಲೋಚಿಸಿ ಸುಧಾರಣೆ ತಂದರು" ಎಂದು ಮುಕ್ತಕಂಠದಿಂದ ಕೊಂಡಾಡುತ್ತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ಆರಂಭಕ್ಕೆ ಡಾ. ಶ್ಯಾಮಲ ಪ್ರಕಾಶ್ ಅವರು ಪುರಂದರದಾಸರ 'ಕರುಣಿಸೋ ರಂಗ ಕರುಣಿಸೋ ರಂಗ, ಹಗಲು ಇರುಳು ಸ್ಮರಣೆ ಒದಗುವಂತೆ' ಕೀರ್ತನೆಯನ್ನು ಸುಶ್ರಾವ್ಯವಾಗಿ ಹಾಡಿ ಇಡೀ ಕಾರ್ಯಕ್ರಮಕ್ಕೆ ಶಾಂತತೆಯ ವಾತಾವರಣವನ್ನು ತಂದುಕೊಟ್ಟರು.

ಬೆಳವಾಡಿ ಅವರ ಸೊಸೆ ಶ್ರೀಮತಿ ಜಯಶ್ರೀ ಅವರು ತಮ್ಮ ಮಾವನವರ ವ್ಯಕ್ತಿತ್ವವನ್ನು ಹಾಗೂ ಅವರ ಕಾರ್ಯವೈಖರಿಯನ್ನು ನೆನಪಿಸಿಕೊಳ್ಳುತ್ತಾ "ನನ್ನ ಮಾವನವರು ತುಂಬಾ ಕ್ರಿಯಾಶೀಲರಾಗಿದ್ದರು. ನಮ್ಮ ಮನೆಯಲ್ಲಿ ಸಾಹಿತ್ಯ ವಿಚಾರಗಳ ಕುರಿತು ತುಂಬಾ ಮಾತ್ನಾಡ್ತಾ ಇದ್ದರು. ಬಿ.ಎಂ.ಶ್ರೀ.ಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳ ಕುರಿತು ನಮ್ಮೊಟ್ಟಿಗೆ ತುಂಬಾ ಹಂಚಿಕೊಳ್ತಿದ್ದರು. ಅವರಿಗೆ ಹೊಂಗನಸು ಪತ್ರಿಕೆಗೆ ಕೆಲಸ ಮಾಡೋದು ಎಂದರೆ ತುಂಬಾ ಉತ್ಸಾಹ. ರೂಮಿನಲ್ಲಿ ಕೂತು ನಿದ್ದೆಯನ್ನು ಪಕ್ಕಕ್ಕಿಟ್ಟು ಪತ್ರಿಕೆಗೆ ಬೇಕಿರುವ ಲೇಖನಗಳನ್ನು ಸಿದ್ಧಪಡಿಸುತ್ತಿದ್ದರು. ನನಗೂ ಮುಂದಿನ ದಿನಗಳಲ್ಲಿ ಬಿ.ಎಂ.ಶ್ರೀ.ಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂಬ ಆಸೆ ಇದೆ. ಬೆಳವಾಡಿಯವರ ಮಗ ಹಾಗೂ ಅಳಿಯ ಊರಿನಲ್ಲಿ ಇಲ್ಲ. ಅವರಿಗೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂಬ ಹಂಬಲ ತುಂಬಾ ಇತ್ತು. ಆದರೆ ಕೆಲಸದ ಒತ್ತಡದಿಂದ ಬೇರೆ ಕಡೆ ಹೋಗಿದ್ದಾರೆ" ಎಂದು ಹೇಳುತ್ತಾ, ಬಿ.ಎಂ.ಶ್ರೀ.ಯಲ್ಲಿ ತಮ್ಮ ಮಾವನವರಿಗೆ ಹಮ್ಮಿಕೊಂಡಿರುವ ನುಡಿನಮನ ಕಾರ್ಯಕ್ರಮ ಕುರಿತು ಮೆಚ್ಚಿಗೆ ಸೂಚಿಸಿ, ಪ್ರತಿಷ್ಠಾನದ ಎಲ್ಲಾ ಪದಾಧಿಕಾರಿಗಳಿಗೆ ಕೃತಜ್ಞತೆ ಸಹಿತ ಧನ್ಯವಾದಗಳನ್ನು ಅರ್ಪಿಸಿದರು.

ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು "ಡಾ. ಪ್ರಭಾಕರ ಬೆಳವಾಡಿ ಅವರು ನನಗೆ ನಾಲ್ಕು ವರ್ಷಗಳ ಬಾಂಧವ್ಯ. ಅವರಿಗಿದ್ದ ಸಾಹಿತ್ಯಕ, ಸಾಂಸ್ಕೃತಿಕ ಆಸಕ್ತಿಯಿಂದ ನನಗೂ ಅವರಿಗೂ ೪೦–೫೦ ವರ್ಷಗಳಷ್ಟು ಪರಿಚಯವೇನೋ ಎನ್ನುವ ರೀತಿಯಲ್ಲಿ ನಮ್ಮಿಬ್ಬರ ಬಾಂಧವ್ಯವಿತ್ತು. ಅವರ ವ್ಯಕ್ತಿತ್ವ ಉನ್ನತವಾದುದು, ವಿಶಾಲವಾದುದು. ಕುಟುಂಬವರ್ಗದವರ ಬಗ್ಗೆ ಅಪಾರವಾದ ವಾತ್ಸಲ್ಯವಿತ್ತು. ಕುಟುಂಬದವರ ಸಹಕಾರದಿಂದ ಉನ್ನತಮಟ್ಟಕ್ಕೆ ಏರುವುದಕ್ಕೆ ಸಾಧ್ಯವಾಯಿತು ಎಂದು ಸದಾ ನೆನಪಿಸಿಕೊಳ್ಳುತ್ತಿದ್ದರು. ತಾಯಿ–ಮಗಳಂತೆ ಹೊಂದಾಣಿಕೆ ಮಾಡಿಕೊಂಡು ಹೋಗುವ ಅತ್ತೆ–ಸೊಸೆ, ಸಂದರ್ಭಗಳನ್ನು ಅರ್ಥೈಸಿಕೊಂಡು ಪ್ರತಿಕ್ರಿಯಿಸುವ ಮಗ–ಅಳಿಯ ಹೀಗೆ ಕುಟುಂಬದ ಅನೇಕ ವಿಚಾರಗಳನ್ನು ಅತ್ಯಂತ ಸಂತೋಷದಿಂದ ನನ್ನೊಟ್ಟಿಗೆ ಹಂಚಿಕೊಳ್ಳುತ್ತಿದ್ದರು. ಬಿ.ಎಂ.ಶ್ರೀ. ಅವರು ನನ್ನ ಬಂಧುಗಳೆಂಬ ಹೆಮ್ಮೆ ಇದ್ದ ಪ್ರಭಾಕರ್ ತಾನು ಪ್ರತಿಷ್ಠಾನದ ಭಾಗವಾಗಬೇಕು, ಪ್ರತಿಷ್ಠಾನದೊಂದಿಗೆ ಪಾತ್ರವಹಿಸಬೇಕೆಂಬ ಉತ್ಸಾಹದಿಂದ ಬಂದವರು. ಚುನಾವಣೆಯಲ್ಲಿ ಸ್ಪರ್ಧಿಸಿ ವಿಜೇತರಾಗಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಕೋಶಾಧಿಕಾರಿಯಾಗಿ ಪ್ರತಿಷ್ಠಾನದ ಲೆಕ್ಕಪತ್ರಗಳನ್ನು ಬಹಳ ಶಿಸ್ತಾಗಿ ನಿರ್ವಹಿಸಿದವರು. ಪ್ರಾಮಾಣಿಕವಾಗಿ, ಶ್ರದ್ಧೆಯಿಂದ, ಸ್ವಚ್ಛವಾಗಿ ಯೋಜನೆ ರೂಪಿಸಿದ್ದವರು. ಮುಂದೆ ಹೊಂಗನಸು ಪತ್ರಿಕೆಯ ಸಂಪಾದಕರಾಗಿ ಜವಾಬ್ದಾರಿ ವಹಿಸಿಕೊಂಡು ಅದನ್ನು ವಿಶೇಷವಾಗಿ ರೂಪಿಸಬಹುದೆಂದು ಚರ್ಚಿಸಿ ಅದಕ್ಕೆ ಹೊಸ ಸ್ವರೂಪವನ್ನು ಕೊಟ್ಟರು. ೮ ಪುಟಗಳ ಪತ್ರಿಕೆಯಾಗಿ ವರ್ಣಮಯವಾಗಿ ಹೊರಹೊಮ್ಮುವಂತೆ ರೂಪಿಸಿದರು. ಕನ್ನಡ ಭಾಷೆ, ನಾಡು ಕುರಿತು ತಮ್ಮ ಸಂಪಾದಕೀಯದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಬರೆದರು. ಡುಂಡಿರಾಜ್ ಅವರ ಬರವಣಿಗೆಯ ಶೈಲಿಗೆ ಮಾರುಹೋಗಿದ್ದ ಬೆಳವಾಡಿಯವರು ಆ ಮಾದರಿಯಲ್ಲಿ ಕವಿತೆಗಳನ್ನು ಬರೆದು ಆಗಾಗ





ವಾಟ್ಸಾಪಿನಲ್ಲಿ ಕಳುಹಿಸಿಕೊಡುತ್ತಿದ್ದರು. ಅದು ಕಾಕತಾಳೀಯವೋ ಅಥವಾ ಯಾವ ಪ್ರೇರಣೆಯೋ, ಜೂನ್ ತಿಂಗಳಿನ ಲೇಖನಗಳನ್ನು ನಮಗೆ ಮೇ ೧೮ರಂದೇ ಕಳುಹಿಸಿಕೊಟ್ಟಿದ್ದರು. ಮುಂದೆ ಅವರ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾದರು. ೮೦ ವರ್ಷ ಪೂರೈಸಿ, ತುಂಬುಜೀವನ ನಡೆಸಿ ಈಗ ತಮ್ಮ ಬದುಕಿಗೆ ವಿದಾಯ ಹೇಳಿದ್ದಾರೆ. ಅವರು ಬಿಟ್ಟುಹೋಗಿರುವ ಆದರ್ಶಗಳು ನಮ್ಮ ಪ್ರತಿಷ್ಠಾನದ ಎಲ್ಲಾ ಕೆಲಸಗಳಲ್ಲಿ ಶಕ್ತಿ ತುಂಬಲಿ" ಎಂದು ಹೇಳುತ್ತಾ ಡಾ. ಪ್ರಭಾಕರ ಬೆಳವಾಡಿಯವರಿಗೆ ತಮ್ಮ ನುಡಿನಮನವನ್ನು ಸಲ್ಲಿಸಿದರು.

ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಗುರುಪ್ರಸಾದ್ ನುಡಿನಮನ ಸಲ್ಲಿಸುತ್ತಾ "ಡಾ. ಪ್ರಭಾಕರ ಬೆಳವಾಡಿ ಅವರು ೨೦೧೧ರಲ್ಲಿ ಪ್ರತಿಷ್ಠಾನದ ಸದಸ್ಯತ್ವವನ್ನು ಪಡೆದುಕೊಂಡವರು. ಹೊಂಗನಸು ಪತ್ರಿಕೆಯಿಂದ ನನಗೂ ಅವರಿಗೂ ಬಾಂಧವ್ಯ ಬೆಳೆಯಿತು. ಒಂದು ಸಲ ಅವರು ಇವೆಂಟ್ ಮ್ಯಾನೇಜ್ಮೆಂಟ್ ತುಂಬಾ ಇಷ್ಟ ಎಂದಿದ್ದರು. ತುಂಬಾ ಒಳ್ಳೆ ಸಂಘಟನಾಕಾರರು. ಬಬ್ಬೂರುಕಮ್ಮೆ ಸಂಘದಲ್ಲಿ ಸದಸ್ಯರಾಗಿದ್ದು, ಅಲ್ಲಿ ಕೋಶಾಧಿಕಾರಿಗಳಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದವರಾಗಿದ್ದರು. ಮಕ್ಕಳಿಗಾಗಿ ಸಾಹಿತ್ಯ ಬರೆಯುವುದೆಂದರೆ ತುಂಬಾ ಇಷ್ಟವಾಗಿತ್ತು. ನಮ್ಮ ಸನಾತನ ಧರ್ಮದ ವಿಚಾರಗಳನ್ನು, ಪುರಾಣದ ಕಥೆಗಳನ್ನು, ಹಬ್ಬ ಹರಿದಿನಗಳ ವಿಚಾರಗಳನ್ನು ಹೊಸ ಪರಂಪರೆಯವರಿಗೆ ತಿಳಿಸಕೊಡಬೇಕು, ಉತ್ತೇಜಿಸಬೇಕು ಎನ್ನುವ ಜವಾಬ್ದಾರಿ ನಮ್ಮದು ಎಂದು ಅವರಿಗಾಗಿ ಪುಟ್ಟ ಪುಟ್ಟ ಪುಸ್ತಕಗಳನ್ನು ಬರೆದಿದ್ದರು" ಎಂದು ಹೇಳಿದರು.

ಡಾ. ಶ್ಯಾಮಲಾ ಪ್ರಕಾಶ್ ಅವರು ಮಾತನಾಡುತ್ತಾ "ನಾನು ಬೆಂಗಳೂರಿಗೆ ಬರುವ ಮೊದಲು ಮುಂಬೈನಲ್ಲಿದ್ದೆ. ಬೆಂಗಳೂರಿಗೆ ಬಂದ ಮೇಲೆ ಒಂದರ್ಥದಲ್ಲಿ ಖಾಲಿ ಖಾಲಿ ಇದ್ದಂತಿತ್ತು. ಆಗ ನನಗೆ ಬಿ.ಎಂ.ಶ್ರೀ.ಯಲ್ಲಿ ನಡೆಯುವ ರಸಗ್ರಹಣ ತರಗತಿಗಳಿಗೆ ಪರಿಚಯ ಮಾಡಿದ್ದು ಡಾ. ಪ್ರಭಾಕರ ಬೆಳವಾಡಿ ಅವರು. ಬೆಂಗಳೂರಿನಲ್ಲಿ ನಾನು ನನ್ನ ಅಸ್ಮಿತೆಯನ್ನು ಕಂಡುಕೊಳ್ಳುವಂತೆ ಮಾಡಿದ್ದು ಪ್ರಭಾಕರ್ ಸರ್. ನನ್ನ ಜೀವನದಲ್ಲಿ ಪ್ರಭಾಕರ್ ಸರ್ ತುಂಬಾ ಮುಖ್ಯ" ಎಂದು ಭಾವುಕರಾಗಿ ತಮ್ಮ ನುಡಿನಮನವನ್ನು ಸಲ್ಲಿಸಿದರು.

ಡಾ. ಅನಿಲ್‌ಕುಮಾರ್ ಅವರು ಮಾತನಾಡುತ್ತಾ "ಡಾ. ಪ್ರಭಾಕರ ಬೆಳವಾಡಿಯವರು ಮೂಲತಃ ರಸಾಯನಶಾಸ್ತ್ರದ ಪ್ರಾಧ್ಯಾಪಕರು. ಆದರೆ ಅವರಲ್ಲಿ ಒಬ್ಬ ಸಾಹಿತಿ ಇದ್ದ. ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡಿದ್ದರು. ಜೊತೆಗೆ ಲೆಕ್ಕಶಾಸ್ತ್ರವನ್ನು ಕಲಿತು ನಮ್ಮ ಪ್ರತಿಷ್ಠಾನದ ಕೋಶಾಧಿಕಾರಿಯಾಗಿ ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ಅವರು ಜೀವನವನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಅವರಿಗೆ ಡ್ರೆಸ್‌ಸೆನ್ಸ್ ತುಂಬಾ ಚೆನ್ನಾಗಿತ್ತು. ತಮ್ಮ ೮೦ರ ಹರೆಯದಲ್ಲಿಯೂ ನೀಟಾಗಿ ಡ್ರೆಸ್ ಮಾಡ್ಕೊಂಡು ಬರ್ತಿದ್ದರು. ಯಾವುದೇ ಕೆಲಸ ತೆಗೆದುಕೊಂಡರೂ ಅದಕ್ಕೆ ನ್ಯಾಯ ಒದಗಿಸುವಂತೆ ಕೆಲಸ ಮಾಡುತ್ತಿದ್ದರು. ಸದಾ ಲವಲವಿಕೆಯಿಂದ ಇದ್ದು ಪರಿಪೂರ್ಣ ವ್ಯಕ್ತಿತ್ವವುಳ್ಳವರಾಗಿದ್ದರು. ತಂತ್ರಜ್ಞಾನದ ಅಳವಡಿಕೆಯಲ್ಲಿ ತುಂಬಾ ಮುಂದಿದ್ದರು. ಹೀಗಾಗಿ ಹೊಂಗನಸು ಪತ್ರಿಕೆ ಡಿಜಿಟಲ್ ಪತ್ರಿಕೆಯಾಗಿ ಹೊರಹೊಮ್ಮಲು ಕಾರಣರಾದರು" ಎಂದು ತಮ್ಮ ನುಡಿನಮನವನ್ನು ಸಲ್ಲಿಸಿ ಅವರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಕೋಶಾಧಿಕಾರಿಗಳಾದ ಚಂದ್ರಶೇಖರ್ ನಾದೂರು, ಪ್ರೊ. ಜಿ. ಅಶ್ವತ್ಥನಾರಾಯಣ, ಬಿ.ಆರ್. ರವೀಂದ್ರನಾಥ್, ಡಾ. ವಿಜಯಾ ಸುಬ್ಬರಾಜ್, ಡಿ.ನಂ.ವೆಂಕಟರಮಣಯ್ಯ, ಎಂ.ತಿಮ್ಮಯ್ಯ, ನಾ.ಶ್ರೀಧರ್ ಮುಂತಾದ ಗಣ್ಯರುಗಳು ಭಾಗವಹಿಸಿ ಡಾ. ಪ್ರಭಾಕರ ಬೆಳವಾಡಿಯವರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಿ, ಅವರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸಿದರು.

## ೧೯/೭/೨೦೨೬ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ 'ಸತ್ಯಪುತ್ರ ಬಲಿಚಕ್ರವರ್ತಿ' ದತ್ತಿ ಆಶ್ರಯದಲ್ಲಿ ರಾಗ್ ಮಲ್ಹಾರ್ (೧೬ ರಿಂದ ೨೦ ವರ್ಷದವರಿಗೆ) ಮತ್ತು ಮಾಲ್‌ಕೌನ್ಸ್ (ಹಿಂದೋಳ) ರಾಗ (೮ ರಿಂದ ೧೫ ವರ್ಷದವರಿಗೆ)ಗಳಲ್ಲಿ ಗಾಯನ ಸ್ಪರ್ಧೆ

**ಸಹಕಾರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಈ ಸ್ಪರ್ಧೆಗಳಲ್ಲಿ ಒಟ್ಟು ೨೯ ಸ್ಪರ್ಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮ ಕು.ಮಾಧುರ್ಯ ಪ್ರಸಾದ್ ಅವರ 'ಕೋಟಿಕೋಟಿ ನಮನ ನಿನಗೆ ಮಹಾಗಣಪತಿ' ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು.

ನಂತರದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ಕಾರ್ಯಕ್ರಮಕ್ಕೆ ಆಗಮಿಸಿರುವ ಸ್ಪರ್ಧಿಗಳನ್ನು, ಪೋಷಕರನ್ನು, ದತ್ತಿದಾನಿಗಳನ್ನು, ತೀರ್ಪುಗಾರರನ್ನು, ಸಭಿಕರನ್ನು ಗೌರವದಿಂದ, ಪ್ರೀತಿಯಿಂದ ಸ್ವಾಗತಿಸಿದರು.

ಅದಕ್ಕೂ ಮೊದಲು ತಮ್ಮ ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ "ಗುರುವಿನ ಮೇಲಿನ ಭಕ್ತಿ ಅಭಿಮಾನದಿಂದ ಒಬ್ಬ ಶಿಷ್ಯನಿಂದ ಪ್ರಾರಂಭಗೊಂಡ ಬಿ.ಎಂ.ಶ್ರೀ. ಪ್ರತಿಷ್ಠಾನ ಇವತ್ತು ನಾಡಿನಾದ್ಯಂತ ಸಾಹಿತ್ಯ, ಸಂಸ್ಕೃತಿ, ಸಂಗೀತ ಕಾರ್ಯಕ್ರಮಗಳನ್ನು ನಡೆಸುಕೊಂಡು ಬರುತ್ತಿದೆ. ಆ ಎಲ್ಲಾ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆಯಬೇಕಾದರೆ ಅನೇಕರು ದತ್ತಿಗಳನ್ನು ಇಟ್ಟು ಆರ್ಥಿಕ ಬಲವನ್ನು ತುಂಬಿರುವುದರಿಂದ ಮಾತ್ರವೇ ಸಾಧ್ಯವಾಗುತ್ತಿದೆ. ಇವತ್ತು ಬಿ.ಎಂ.ಶ್ರೀ.ಯಲ್ಲಿ ನೂರು ಕಾರ್ಯಕ್ರಮಗಳನ್ನು ನಡೆಸುವಷ್ಟು ದತ್ತಿಗಳು ಇವೆ. ಅಂತಹ ದತ್ತಿ ದಾನಿಗಳ ಸಾಲಿನಲ್ಲಿ ಬಹುದೊಡ್ಡ ಆಧಾರ ಸ್ತಂಭವೆಂದರೆ ಶ್ರೀ ಮೋಹನ್‌ದೇವ್ ಆಳ್ವ ಹಾಗೂ ಡಾ. ಶೈಲಜಾ ಆಳ್ವ ಅವರು. ಇವರು ಬಿ.ಎಂ.ಶ್ರೀ. ಪ್ರತಿಷ್ಠಾನದ ಬಗ್ಗೆ ಅಪಾರ ಪ್ರೀತಿ, ಗೌರವವನ್ನು ಇರಿಸಿಕೊಂಡು ಸರಿಸುಮಾರು ೮೦ ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಮೊತ್ತವನ್ನು ಯಾವ ಪಂಥಕ್ಕೂ, ವರ್ಗಕ್ಕೂ ಸೀಮಿತವಾಗದೆ ಅನೇಕರ ಹೆಸರುಗಳಲ್ಲಿ ಬೇರೆ ಬೇರೆ ಮಾದರಿಯ ಕಾರ್ಯಕ್ರಮಗಳಿಗೆ ದತ್ತಿಗಳನ್ನು ಇರಿಸಿ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಬಹುದೊಡ್ಡ ಬಲವನ್ನು ತುಂಬುವ ಕೆಲಸವನ್ನು ಮಾಡಿದ್ದಾರೆ" ಎಂದು ತಿಳಿಸುತ್ತಾ ವೇದಿಕೆಯಲ್ಲಿದ್ದ ಶ್ರೀ ಕೆ. ಮೋಹನ್‌ದೇವ್ ಆಳ್ವ ಅವರನ್ನು, ತೀರ್ಪುಗಾರರನ್ನು, ಅಧ್ಯಕ್ಷರನ್ನು ಸಭೆಗೆ ಪರಿಚಯಿಸುತ್ತಾ ಸ್ವಾಗತಿಸಿದರು.

ಸ್ಪರ್ಧಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಕೆ. ಮೋಹನ್‌ದೇವ್ ಆಳ್ವ, ತೀರ್ಪುಗಾರರಾಗಿ ಆಗಮಿಸಿದ್ದ ವಿದ್ವಾನ್ ವೆಂಕಟೇಶ್ ಶರ್ಮ ಹಾಗೂ ವಿದ್ವಾನ್ ಅನನ್ಯ ಭಾರ್ಗವ್ ಅಧ್ಯಕ್ಷರಾದ

ಡಾ. ಬೈರಮಂಗಲ ರಾಮೇಗೌಡ ಅವರು ಸಾಂಕೇತಿಕವಾಗಿ ದೀಪವನ್ನು ಬೆಳಗಿಸುತ್ತಾ ಸ್ಪರ್ಧೆಗೆ ಚಾಲನೆ ನೀಡಿದರು.

ಸ್ಪರ್ಧೆಯನ್ನು ಉದ್ಘಾಟಿಸಿದ ದತ್ತಿ ದಾನಿಗಳು ಹಾಗೂ ಮುಖ್ಯ ಅತಿಥಿಗಳಾಗಿದ್ದ ಶ್ರೀ ಕೆ. ಮೋಹನ್‌ದೇವ್ ಆಳ್ವ ಅವರು ಸ್ಪರ್ಧಿಗಳನ್ನು ಕುರಿತು ಮಾತನಾಡುತ್ತಾ "ಇವತ್ತು ನನಗೆ ಅತ್ಯಂತ ಸಂತೋಷದ ದಿನ. ಮೊಟ್ಟಮೊದಲಿಗೆ ನಾನು ಬಿ.ಎಂ.ಶ್ರೀ. ಅವರನ್ನು ಅತ್ಯಂತ ಭಕ್ತಿಪೂರ್ವಕವಾಗಿ ಸ್ಮರಣೆ ಮಾಡುತ್ತೇನೆ. ಮಂಗಳೂರಿನಲ್ಲಿದ್ದಾಗ ನಮ್ಮ ಮನೆಗೆ ಆಗಾಗ ಬರೋರು. ನಮ್ಮ ತಂದೆಯವರೊಟ್ಟಿಗೆ ಕರ್ನಾಟಕ ಏಕೀಕರಣದ ಬಗ್ಗೆ ಮಾತನಾಡೋರು. ನಾನು ಚಿಕ್ಕವನಾಗಿದ್ದಾಗ ಅವರನ್ನು ತುಂಬಾ ಚೆನ್ನಾಗಿ ತಿಳಿದಿದ್ದೆ. ಈ ಸ್ಪರ್ಧೆಗೆ ತಯಾರು ಮಾಡಿ ನಿಮ್ಮೊಟ್ಟಿಗೆ ಬಂದಿರುವ ತಾಯಂದಿರುಗಳಿಗೆ, ಪೋಷಕರುಗಳಿಗೆ ನಾನು ಮೊದಲು ಧನ್ಯವಾದಗಳನ್ನು ತಿಳಿಸುತ್ತೇನೆ.

ಮೊದಲಿಗೆ ಈ ಸತ್ಯಪುತ್ರ ಬಲಿಚಕ್ರವರ್ತಿ ಯಾರು? ಎಂಬುದನ್ನು ತಿಳಿಯಬೇಕಿದೆ. ನನಗೆ ದ.ರಾ.ಬೇಂದ್ರೆ ಹಾಗೂ ಶಂ.ಬಾ.ಜೋಶಿ ಅವರು ವಿಶೇಷ ಚೇತನಗಳು. ಇವರು ಸತ್ಯಪುತ್ರ ಬಲಿಚಕ್ರವರ್ತಿ ಅವರ ಕುರಿತು ತುಂಬಾ ವಿಚಾರಗಳನ್ನು ತಿಳಿಸಿದ್ದರು. ಸತ್ಯಪುತ್ರ ಬಲಿಚಕ್ರವರ್ತಿ ಬೌದ್ಧ ಧರ್ಮದ ಅನುಯಾಯಿ. ಇದಕ್ಕೂ ಮೊದಲು ಸನಾತನ ಧರ್ಮಕ್ಕೆ ಸೇರಿದವರಾಗಿದ್ದರು. ಕಾಲಾನಂತರದಲ್ಲಿ ಶಾಸ್ತ್ರ ಮತ್ತು ಶಸ್ತ್ರ ಇವೆರಡರಲ್ಲಿ ಶಸ್ತ್ರವನ್ನು ಮರೆತು ಶಾಂತಿಯ ಅನುಯಾಯಿಗಳಾದರು. ತುಳುನಾಡು, ಕೇರಳ, ಸಿಂಹಳ ಈ ಎಲ್ಲಾ ಕಡೆಗಳಲ್ಲಿ ಸಂಚರಿಸುತ್ತಾ ಶಾಂತಿ ಸಂದೇಶವನ್ನು ಸಾರುತ್ತಾ ಅನೇಕ ಕಡೆಗಳಲ್ಲಿ ಓಡಾಡುತ್ತಿದ್ದರು. ಓಡಾಡಿದ ಕಡೆಗಳಲ್ಲಿ ಕೃಷಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು. ಅಸ್ಪೃಶ್ಯತೆಯನ್ನು ಒಪ್ಪುತ್ತಿರಲಿಲ್ಲ. ಸಕಲಕಲಾವಲ್ಲಭರಾಗಿ ಇವರು ಅನೇಕ ಕಲೆಗಳಲ್ಲಿ ಪ್ರವೀಣರಾಗಿದ್ದರು. ಇಂತಹ ಮಹನೀಯರ ಹೆಸರಿನಲ್ಲಿ ಮಕ್ಕಳಿಗಾಗಿ ಈ ಸಂಗೀತ ಸ್ಪರ್ಧೆಯನ್ನು ಏರ್ಪಡಿಸಿದ್ದೇವೆ. ಮುಂದೆ ಸತ್ಯಪುತ್ರ ಬಲಿಚಕ್ರವರ್ತಿಯ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಿನ ಅಧ್ಯಯನ ಕೈಗೊಳ್ಳಬೇಕು" ಎಂದು ಆಶಿಸುತ್ತಾ ಸ್ಪರ್ಧೆಯಲ್ಲಿ ಭಾಗವಹಿಸಿದವರೆಲ್ಲರಿಗೂ ಶುಭಾಶಯ ಕೋರಿದರು.

ನಂತರ ವಿದ್ವಾನ್ ವೆಂಕಟೇಶ್ ಶರ್ಮ ಅವರು ಸ್ಪರ್ಧಿಗಳಿಗೆ ಅಗತ್ಯವಿರುವ ಸ್ಪರ್ಧಾನಿಯಮಗಳ ಕುರಿತು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಿರೂಪಣೆಯನ್ನು ಪ್ರತಿಷ್ಠಾನದ ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಅವರು ನಡೆಸಿಕೊಟ್ಟರು.

ಸ್ಪರ್ಧೆಯಲ್ಲಿ ಸಾತ್ವಿಕ್ ಪಿ. ರಾವ್, ಅಜಿತ್ ಎನ್., ಆದಿತ್ಯ ಶ್ರೀನಿಧಿ, ಲೇಖನ ಸಿ., ಉಷಾಪ್ರಿಯಾ, ಅಸ್ಮಿತಾ ಬಿ.ಎನ್., ಸುಮದ್ವಕಿರಣ್ ಭಾರತಿ, ವಿಭ, ವೃಷಿಕ ಎನ್. ಆರ್., ಅವನಿ ಭಟ್ – ಹೀಗೆ ೨೯ ಸ್ಪರ್ಧಿಗಳು ಭಾಗವಹಿಸಿ ಅತ್ಯಂತ ಸುಶ್ರಾವ್ಯವಾಗಿ ಹಾಡಿ ಸಭಿಕರಲ್ಲಿ ಆನಂದವನ್ನುಂಟುಮಾಡಿದರು.

ಸ್ಪರ್ಧೆಯ ನಂತರ ಸಮಾರೋಪ ಭಾಷಣ ಮಾಡಿದ ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಬೈರಮಂಗಲ ರಾಮೇಗೌಡ ಅವರು "ಈ ದಿನ ತುಂಬಾ ಸಂತೋಷವಾಗುತ್ತಿದೆ. ಕಾರಣ ಎಂದಿಗಿಂತ ಇವತ್ತು ಹೆಚ್ಚಿನ ಸ್ಪರ್ಧಿಗಳು ಭಾಗವಹಿಸಿದ್ದಾರೆ. ಹೀಗಾಗಿ ಸ್ಪರ್ಧೆಯ ಸಮಯ ನನ್ನ ನಿರೀಕ್ಷೆಗಿಂತ ಜಾಸ್ತಿ ಆಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಸ್ಪರ್ಧೆಯ ಪೈಪೋಟಿ ಜಾಸ್ತಿಯಾಗಿತ್ತು. ತಾಯಂದಿರು ತಮ್ಮ ಮಕ್ಕಳನ್ನು ಸಂಗೀತ ಶಾಲೆಗೆ ಸೇರಿಸಿ ಅಭ್ಯಾಸ ಮಾಡುವಂತೆ ಎಚ್ಚರವಹಿಸಿ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಕರೆತಂದಿರುವ ತಮಗೆ ಮೊದಲು ಧನ್ಯವಾದಗಳನ್ನು, ಅಭಿನಂದನೆಗಳನ್ನು, ನಮಸ್ಕಾರಗಳನ್ನು ತಿಳಿಸುತ್ತೇನೆ. ಇವತ್ತಿನ ಸ್ಪರ್ಧೆಯಲ್ಲಿ ಸ್ಪರ್ಧಿಗಳು ಹಾಡುವಾಗ ಅವರ ಹಾವಭಾವಗಳು, ಆಂಗಿಕ ಚಲನವಲನಗಳನ್ನು ನೋಡುವಾಗ ನನಗೆ ಪಂಡಿತ್ ಭೀಮಸೇನ್ ಜೋಶಿ ಅವರ ನೆನಪು ಉಂಟಾಯಿತು. ಪ್ರೋತ್ಸಾಹಿಸಿದರೆ ಇವರು ಕೂಡ ಅವರಷ್ಟೇ ದೊಡ್ಡ ಸಂಗೀತ ವಿದ್ವಾಂಸರಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಮೊದಲಿಗೆ ಸಂಗೀತಕ್ಕೆ ಹೆಚ್ಚಿನ ಅವಕಾಶವಿರಲಿಲ್ಲ. ಇತ್ತೀಚೆಗೆ ಅದು ಹೆಚ್ಚು ಹೆಚ್ಚು ತೆರೆದುಕೊಳ್ಳುವಂತೆ ಆಗಿದ್ದು ಶ್ರೀಯುತ ಮೋಹನ್‌ದೇವ್ ಆಳ್ವ ಅವರು ಇಟ್ಟಿರುವ ದತ್ತಿಗಳಿಂದ. ಸಂಗೀತ ಎನ್ನುವುದು ವಿದ್ಯಾರ್ಥಿಗಳಲ್ಲಿ ಸಾತ್ವಿಕ ಗುಣವನ್ನು ವಿಕಾಸಗೊಳಿಸುತ್ತದೆ. ರಜೋಗುಣ, ತಾಮಸಗುಣಗಳ ಬೆಳೆ ಮಾರಕವಾದುದು. ಈ ಸಂಗೀತ ಎನ್ನುವುದು ಮಕ್ಕಳಲ್ಲಿ ರಜಸ್ಸು, ತಾಮಸವನ್ನು ಮೆಟ್ಟಿ ಸಾತ್ವಿಕವನ್ನು ಹೆಚ್ಚಿಸಿಕೊಳ್ಳುವಂತೆ ಮಾಡುತ್ತದೆ" ಎಂದು ತಮ್ಮ ಮಾತುಗಳನ್ನಾಡಿ ಶುಭ ಹಾರೈಸಿದರು.

ಶ್ರೀಯುತ ಮೋಹನ್‌ದೇವ್ ಆಳ್ವ ಅವರು ಸ್ಪರ್ಧೆಯಲ್ಲಿ ಭಾಗವಹಿಸಿದ್ದವರೆಲ್ಲರಿಗೂ ಸರ್ಟಿಫಿಕೇಟ್ ಜೊತೆಗೆ ಒಂದೊಂದು ಪುಸ್ತಕವನ್ನು ಕೊಡಿಸುವ ಮೂಲಕ ಓದುವ ಹವ್ಯಾಸವನ್ನು ಹೆಚ್ಚಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಯಿತು.

**ಸ್ಪರ್ಧೆಯಲ್ಲಿ ವಿಜೇತರಾದವರು :**

**೧೬ ರಿಂದ ೨೦ ವರ್ಷ ವಯಸ್ಸಿನವರಿಗೆ (ರಾಗ್ ಮಲ್ಹಾರ್ ರಾಗ)**

| | |
|---|---|
| ಸಾತ್ವಿಕ್ ಪಿ.ರಾವ್ – ಪ್ರಥಮ ಬಹುಮಾನ | ೪,೦೦೦/– |
| ಆದಿತ್ಯ ಶ್ರೀನಿಧಿ ತಾಯೂರು – ದ್ವಿತೀಯ ಬಹುಮಾನ | ೩,೦೦೦/– |
| ಅಜಿಂಕ್ಯ ಎ. – ತೃತೀಯ ಬಹುಮಾನ | ೨,೦೦೦/– |
| ವೃಷಪ್ರಿಯಾ – ಪ್ರೋತ್ಸಾಹಕರ ಬಹುಮಾನ | ೫೦೦/– |

**೮ ರಿಂದ ೧೪ ವರ್ಷ ವಯಸ್ಸಿನವರಿಗೆ (ಮಾಲ್‌ಕೌನ್ಸ್– ಹಿಂದೋಳ ರಾಗ)**

| | |
|---|---|
| ಅವನಿ ಭಟ್ – ಪ್ರಥಮ ಬಹುಮಾನ | ೪,೦೦೦/– |
| ಅಭಿನವ್ ಶ್ರೀನಿಧಿ ತಾಯೂರು – ದ್ವಿತೀಯ ಬಹುಮಾನ | ೩,೦೦೦/– |
| ತ್ರಿಧಾರಾ ಭಾರದ್ವಾಜ್ – ತೃತೀಯ ಬಹುಮಾನ | ೨,೦೦೦/– |
| ಸಾತ್ವಿಕ್ ಎಸ್. – ಪ್ರೋತ್ಸಾಹಕರ ಬಹುಮಾನ | ೫೦೦/– |

ದತ್ತಿ ದಾನಿಗಳಾದ ಶ್ರೀ ಮೋಹನ್‌ದೇವ್ ಆಳ್ವ ಅವರು ವಿಜೇತರಿಗೆ ಬಹುಮಾನಗಳನ್ನು ನೀಡಿ ಅಭಿನಂದಿಸಿದರು.

ಕೊನೆಯಲ್ಲಿ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಶಾಂತರಾಜು ಅವರು ವಂದನಾರ್ಪಣೆಯ ಮೂಲಕ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು. ಹೀಗೆಯೇ ಮುಂದೆ ನಡೆಯುವ ಸ್ಪರ್ಧೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡಬೇಕೆಂದು ವಿನಂತಿಸಿದರು.



# ಬಿ.ಎಂ.ಶ್ರೀ. ಪ್ರತಿಷ್ಠಾನದ ಸರ್ವಸದಸ್ಯರ ಸಭೆ

**ಬಿ.ಎಂ.ಶ್ರೀ. ಪ್ರತಿಷ್ಠಾನ (ರಿ).**
ಬಿ.ಎಂ.ಶ್ರೀ. ಪ್ರತಿಷ್ಠಾನ ರಸ್ತೆ, ೩ನೇ ಮುಖ್ಯರಸ್ತೆ,
ನರಸಿಂಹರಾಜ ಕಾಲೋನಿ, ಬೆಂಗಳೂರು-೫೬೦೦೧೯

## ೪೬ನೇ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳಿವಳಿಕೆ ಪತ್ರ

ಮಾನ್ಯರೇ,

ಬಿ.ಎಂ.ಶ್ರೀ. ಪ್ರತಿಷ್ಠಾನದ **ನಲವತ್ತಾರನೇ** ಸರ್ವಸದಸ್ಯರ ಸಭೆಯನ್ನು ದಿನಾಂಕ ೩೦-೦೮-೨೦೨೬ರಂದು ಭಾನುವಾರ ಬೆಳಗ್ಗೆ ೧೦-೩೦ಕ್ಕೆ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ಡಾ.ಬೈರಮಂಗಲ ರಾಮೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಗುತ್ತದೆ. ತಾವು ದಯವಿಟ್ಟು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

### ಕಾರ್ಯಸೂಚಿ

೧. ಸ್ವಾಗತ ಮತ್ತು ಅಗಲಿದ ಸದಸ್ಯರಿಗೆ ಹಾಗೂ ಗಣ್ಯರಿಗೆ ಸಂತಾಪ ಸೂಚನೆ.
೨. ಸರ್ವಸದಸ್ಯರ ಸಭೆಯ ತಿಳಿವಳಿಕೆ ಪತ್ರವನ್ನು ಓದಿ ಸ್ಥಿರೀಕರಿಸುವುದು.
೩. ೨೦೨೫-೨೬ನೇ ಸಾಲಿನ ಆಡಳಿತ ವರದಿಯ ಮಂಡನೆ ಮತ್ತು ಪರಿಶೀಲನೆ ಹಾಗೂ ಅಂಗೀಕರಿಸುವುದು.
೪. ೨೦೨೫-೨೬ನೇ ಸಾಲಿನ ಲೆಕ್ಕಪರಿಶೋಧಕರು ದೃಢೀಕರಿಸಿದ ಲೆಕ್ಕಪತ್ರಗಳು ಮತ್ತು ವರದಿಗಳ ಮಂಡನೆ ಮತ್ತು ದೃಢೀಕರೀಸುವುದು.
೫. ೨೦೨೬-೨೭ನೇ ಸಾಲಿನ ಆಯ-ವ್ಯಯ ಅಂದಾಜು ಪಟ್ಟಿ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ.
೬. ೨೦೨೬-೨೭ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು.
೭. ಸದಸ್ಯರು ನಿಯಮಾನುಸಾರ ಕಳುಹಿಸಿರುವ ಸೂಚನೆಗಳನ್ನು ಮಂಡಿಸುವುದು.
೮. ಇತರ ವಿಚಾರಗಳು (ಅಧ್ಯಕ್ಷರ ಅನುಮತಿ ಮೇರೆಗೆ)
೯. ಅಧ್ಯಕ್ಷರ ಸಮಾರೋಪ ಭಾಷಣ
೧೦.ನಿಯಮಾನುಸಾರ ನಿವೃತ್ತರಾಗುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಚುನಾವಣೆ (೨೦೨೬-೨೯ರ ಅವಧಿಗೆ).
೧೧.ವಂದನಾರ್ಪಣೆ.

### ಚುನಾವಣೆ ವೇಳಾಪಟ್ಟಿ

| | |
|---|---|
| * **ನಾಮಪತ್ರಗಳನ್ನು ಪಡೆಯಲು ಮತ್ತು ಸಲ್ಲಿಸಲು ಪ್ರಾರಂಭದ ದಿನಾಂಕ** | **೦೪-೦೮-೨೦೨೬ ಮಂಗಳವಾರ** |
| * **ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ** | **೧೦-೦೮-೨೦೨೬ ಸೋಮವಾರ** |
| * **ಉಮೇದುವಾರರ ನಾಮಪತ್ರಗಳ ಪರಿಶೀಲನೆ ಮತ್ತು ಪ್ರಕಟಣೆ ದಿನಾಂಕ** | **೧೧-೦೮-೨೦೨೬ ಮಂಗಳವಾರ** |
| * **ಉಮೇದುವಾರಿಕೆ ಹಿಂಪಡೆಯುವ ದಿನಾಂಕ** | **೨೦-೦೮-೨೦೨೬ ಗುರುವಾರ** |
| * **ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಂತಿಮಪಟ್ಟಿ ಪ್ರಕಟಿಸುವ ದಿನಾಂಕ** | **೨೨-೦೮-೨೦೨೬ ಶನಿವಾರ** |
| * **ಚುನಾವಣೆ ದಿನಾಂಕ** | **೩೦-೦೮-೨೦೨೬ ಭಾನುವಾರ** |

* ೨೦೨೩-೨೦೨೬ನೇ ಸಾಲಿಗೆ ಆಯ್ಕೆಯಾಗಿ ಈಗ ನಿವೃತ್ತರಾಗಲಿರುವ ಕಾರ್ಯಕಾರಿ ಸಮಿತಿ ಸದಸ್ಯರುಗಳ ಹೆಸರು

**೧. ಡಾ. ಶಾಂತರಾಜು** **೨. ಡಾ. ವಿಜಯಾ ಸುಬ್ಬರಾಜ್**
**೩. ಪ್ರೊ. ಅಶ್ವತ್ಥ ನಾರಾಯಣ(ನೈಷಧಂ ಎಸ್.ಎ.)** **೪. ಡಾ. ಎನ್.ಆರ್. ಲಲಿತಾಂಬ**
**೫. ಎಚ್.ಎಸ್.ಎಂ. ಪ್ರಕಾಶ್**

### ವಿಶೇಷ ಸೂಚನೆ

೧. ಸದಸ್ಯರು ಬರುವಾಗ ತಮ್ಮ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಗುರುತಿನ ಚೀಟಿಯನ್ನು ಪಡೆದಿಲ್ಲದವರು ದಿನಾಂಕ ೨೫-೦೮-೨೦೨೬ರ ಒಳಗೆ ಕಛೇರಿಯಿಂದ ಪಡೆಯಬಹುದು.
೨. ಸದಸ್ಯರು ಕಳುಹಿಸುವ ಸಲಹೆ ಸೂಚನೆಗಳನ್ನು ೨೮-೦೮-೨೦೨೬ ಸಂಜೆ ೫.೩೦ ಗಂಟೆಗೆ ಮುಂಚೆ ಕಛೇರಿಗೆ ತಲುಪಿಸಬೇಕು.
೩. ಆಡಳಿತ ವರದಿ ಮತ್ತು ಲೆಕ್ಕ ಪತ್ರಗಳ ಪ್ರತಿಯನ್ನು ಪ್ರತಿಷ್ಠಾನದ ಕಛೇರಿ ಸಮಯದಲ್ಲಿ ಪಡೆಯಬಹುದು.
೪. ಕಛೇರಿಗೆ ವಾರದ ರಜಾದಿನ ಭಾನುವಾರ ಆಗಿರುತ್ತದೆ.
೫. ಮತದಾನ ಮಾಡಲು ಚುನಾವಣೆ ದಿನಾಂಕ ೩೦.೦೮.೨೦೨೬ಕ್ಕೆ ಕನಿಷ್ಠ ಒಂದು ವರ್ಷ ಪೂರೈಸಿರಬೇಕು.
೬. ಸದಸ್ಯರು ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಲು ಕನಿಷ್ಠ ೫ ವರ್ಷವಾಗಿರಬೇಕು.
೭. ೩೧.೦೮.೨೦೨೫ಕ್ಕೆ ಮುಂಚೆ ಸದಸ್ಯತ್ವ ಪಡೆದವರು ಮಾತ್ರ ಮತದಾನದ ಹಕ್ಕು ಹೊಂದಿರುತ್ತಾರೆ ಹಾಗೂ ೩೧.೦೮.೨೦೨೧ರ ಮುಂಚೆ ಸದಸ್ಯರಾಗಿರುವವರು ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದು.
೮. ಮತದಾನ ಮಾಡುವ ಸದಸ್ಯರು ಚುನಾವಣಾ ಸ್ಪರ್ಧಿಗಳಲ್ಲಿ ೫ ಮಂದಿಗೆ ಕಡ್ಡಾಯವಾಗಿ ಮತ ಹಾಕಬೇಕು. ೫ಕ್ಕಿಂತ ಕಡಿಮೆ ಅಥವಾ ಹೆಚ್ಚು ಮತ ಚಲಾಯಿಸಿದರೆ ಆ ಮತಪತ್ರ ಅಸಿಂಧುವಾಗುತ್ತದೆ.
೯. ಸದಸ್ಯರು ಒಬ್ಬ ಅಭ್ಯರ್ಥಿಯ ನಾಮಪತ್ರಕ್ಕೆ ಸೂಚನೆ, ಮತ್ತೊಬ್ಬ ಅಭ್ಯರ್ಥಿಯ ನಾಮಪತ್ರಕ್ಕೆ ಅನುಮೋದನೆ ಮಾತ್ರ ಮಾಡಬಹುದು.

**ದಿನಾಂಕ: ೦೧-೦೮-೨೦೨೬**
**ಶನಿವಾರ**

**ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ**

ಪ್ರತಿಷ್ಠಾನದ ಸದಸ್ಯರಿಗೆ ಮಾತ್ರ ಪ್ರವೇಶ

**ಡಾ. ಶಾಂತರಾಜು**
ಗೌರವ ಕಾರ್ಯದರ್ಶಿ

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-07-2026

# ಪ್ರಸ್ತುತ ತಿಂಗಳ ಅಂಗಳ

## ಕಾರ್ಯಕ್ರಮಗಳು

(ಅನಿವಾರ್ಯ ಸಂದರ್ಭಗಳಲ್ಲಿ ಕೆಳಕಾಣಿಸಿದ
ಯಾವುದೇ ಕಾರ್ಯಕ್ರಮದ ದಿನಾಂಕ ಬದಲಾಗಬಹುದು)

**೦೨.೦೮.೨೦೨೬ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ವಿದ್ವಾನ್ ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ
ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ
ಪ್ರಶಸ್ತಿ ಪುರಸ್ಕೃತರು : ಡಾ. ಎಸ್. ಪಿ. ಪದ್ಮಪ್ರಸಾದ್
ಜೈನ ಸಾಹಿತ್ಯ ಸಂಶೋಧಕರು, ಸಾಹಿತಿ, ವಿದ್ವಾಂಸರು
ಪ್ರಶಸ್ತಿ ಪ್ರದಾನ : ಡಾ. ಹಂಪ. ನಾಗರಾಜಯ್ಯ
ಹಿರಿಯ ಸಾಹಿತಿಗಳು, ಅಂತಾರಾಷ್ಟ್ರೀಯ ಖ್ಯಾತಿಯ ಸಂಶೋಧಕರು
ಅಭಿನಂದನಾ ನುಡಿ : ಡಾ. ಜಯಲಕ್ಷ್ಮಿ ಅಭಯಕುಮಾರ್
ಲೇಖಕಿ, ನಿವೃತ್ತ ಉಪನ್ಯಾಸಕರು
ಅಧ್ಯಕ್ಷತೆ : ಡಾ. ಬೈರಮಂಗಲ ರಾಮೇಗೌಡ

**೦೯.೦೮.೨೦೨೬ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಶೈಲಜಾ ಆಳ್ವ
ಅವರು ಸ್ಥಾಪಿಸಿರುವ ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್
ದತ್ತಿ ಆಶ್ರಯದಲ್ಲಿ ಭಕ್ತಿಗೀತೆಗಳ ಗಾಯನ

**೧೨.೦೮.೨೦೨೬ ಬುಧವಾರ ಸಂಜೆ ೫.೦೦ ಗಂಟೆಗೆ**
ಎ. ಸುಬ್ಬಯ್ಯ ಹೆಗಡೆ ಶಾಸ್ತ್ರಿ, ಎಂ.ಕೆ. ವಿಜಯಲಕ್ಷ್ಮಿ,
ಎನ್. ಅನಂತರಂಗಾಚಾರ್, ಅನಂತರಂಗ ಪ್ರತಿಷ್ಠಾನ
ಸಂಯುಕ್ತ ದತ್ತಿ ಉಪನ್ಯಾಸ
ವಿಷಯ : ಹರಿಹರನ ಗಿರಿಜಾ– ವರ್ತಮಾನದ ಸಂಘರ್ಷಗಳು
ವಿಚಾರ ಮಂಡನೆ : ಡಾ. ಪ್ರಮೀಳಾ ಮಾಧವ್
ಹಿರಿಯ ಸಾಹಿತಿ, ನಿವೃತ್ತ ಪ್ರಾಧ್ಯಾಪಕರು

**೨೧.೦೮.೨೦೨೬ ಶುಕ್ರವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ರುಕ್ಮಿಣಮ್ಮ ಶ್ರೀ ಸೀತಾರಾಮರಾವ್ ದತ್ತಿ
ವಿಷಯ : ಭಕ್ತಿ ಸಾಹಿತ್ಯಕ್ಕೆ ಪುರಂದರದಾಸರ ಕೊಡುಗೆ
ವಿಚಾರ ಮಂಡನೆ : ಡಾ. ಜಗದೀಶ್ ಬಾಬು, ಕನ್ನಡ ಸಹ ಪ್ರಾಧ್ಯಾಪಕರು

**೩೦.೦೮.೨೦೨೬ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ಸರ್ವಸದಸ್ಯರ ಸಭೆ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ
ಸ್ಥಾನಕ್ಕೆ ಚುನಾವಣೆ

## ಸಿ.ಕೆ. ನಾಗರಾಜರಾವ್ ಹೆಸರಿನ ವೆಬ್‌ಸೈಟಿನ ಐಡಿ

ಅತ್ಯಂತ ಸೃಜನಾತ್ಮಕ ಐತಿಹಾಸಿಕ ಕೃತಿ 'ಪಟ್ಟಮಹಾದೇವಿ ಶಾಂತಲದೇವಿ' ರಚಿಸಿದ ಶ್ರೀ ಸಿ.ಕೆ. ನಾಗರಾಜರಾವ್ ಅವರಿಗೆ ೧೯೭೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅವಾರ್ಡ್ ಮತ್ತು ೧೯೮೩ರಲ್ಲಿ 'ಮೂರ್ತಿದೇವಿ' ಪ್ರಶಸ್ತಿಯೂ ದೊರಕಿದೆ. ಅವರ ಕುಟುಂಬವರ್ಗದವರು ಪ್ರತಿಷ್ಠಾನದಲ್ಲಿ ಅವರ ನೆನಪಿನ ದತ್ತಿಯನ್ನು ಸ್ಥಾಪಿಸಿದ್ದು ಪ್ರತಿಷ್ಠಾನವು ಕಳೆದ ೨೩ ವರ್ಷಗಳಿಂದಲೂ ದತ್ತಿಯಡಿಯಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಇದೀಗ ರಾವ್ ಕುಟುಂಬವರ್ಗದವರು ನಾಗರಾಜರಾವ್ ಹೆಸರಿನಲ್ಲಿ ಒಂದು ವೆಬ್‌ಸೈಟನ್ನು ಬಿಡುಗಡೆಗೊಳಿಸಿರುವುದಾಗಿ ತಿಳಿಸಿದ್ದಾರೆ. ವೆಬ್‌ಸೈಟನ್ನು ಜಾಲಾಡಲು ವಿಳಾಸ: https://www.cknagarajarao.com.
ವಿಳಾಸವನ್ನು ಬಳಸಬೇಕು. ರಾವ್ ಅವರ ಸಮಗ್ರ ಸಾಧನೆ, ಕೃತಿಗಳ ಮಾಹಿತಿಗಳನ್ನು ಪಡೆಯಬಹುದು.

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004. Editor : **Dr. S.L. Manjunath**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೩